**ದಿನಾಂಕಃ 06/12/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: 9 ನೇ ಪ್ರತಿವಾದಿ ಪರ ಶ್ರೀ. ಐ ಆರ್ ಎಸ್ ವಕೀಲರಿಂದಃ**

6. ನಾನು ಪ್ರತಿವಾದಿಗಳಿಗೆ ಕೊಟ್ಟ ಮುಂಗಡ ಹಣ ಬೇರೆಯವರಿಂದ ಪಡೆದು ನೀಡಿದ್ದೆ. ಚೆಕ್ ನಂ. 000622 ನನ್ನ ಖಾತೆಯದ್ದು. ಈಗ ನಾನು ಮಂಗಳೂರಿನಲ್ಲಿ ವಾಸಿಸುತ್ತಿದ್ದೇನೆ. ಸದರಿ ಖಾತೆಯನ್ನು 2012 ರಲ್ಲಿ ತೆರೆದಿದ್ದೆ. ಸದರಿ ಹಣವನ್ನು ನನ್ನ ಗಂಡ ತರಕಾರಿ ಮಾರಾಟ ಮಾಡಿ ಬಂದ ಹಣವಾಗಿತ್ತು. ನಾನು ವ್ಯಾಪಾರ ಆದಾಗಲೆಲ್ಲಾ ನನ್ನ ಖಾತೆಗೆ ಹಣ ಜಮಾ ಮಾಡುತ್ತಿದ್ದೆವು. ನನ್ನ ಖಾತೆಯ ಸ್ಟೇಟ್ ಮೆಂಟ್ ಹಾಜರುಪಡಿಸಲು ತೊಂದರೆ ಇಲ್ಲ.

7. ನಿಪಿ-1 ಅನ್ನು ಪಿರಿಯಾಪಟ್ಟಣದ ಉಪ ನೊಂದಾಣಾಧಿಕಾರಿಯವರ ಕಚೇರಿಯಲ್ಲಿ ವಸಂತಕುಮಾರ್ ರವರು ಬರೆದಿದ್ದರು. ಸದರಿ ವಸಂತ್ ಕುಮಾರ್ ರವರು ಪ್ರತಿವಾದಿಗಳಿಗೆ ಪರಿಚಯ ಇದ್ದಾರೆ. ನಿಪಿ-1 ಕ್ಕೆ ನನ್ನ ಗಂಡ ಮಾಹಿತಿ ನೀಡಿದ್ದರು. ನಿಪಿ- 1 ಅನ್ನು 13 ವರುಷದ ಷರತ್ತಿಗೆಂದು ಬರೆಯಲಾಗಿದೆ. ನಿಪಿ-1 ರಲ್ಲಿ ಬರೆದಿರುವ ಅಂಶಗಳು ಅಷ್ಟಾಗಿ ಗೊತ್ತಿಲ್ಲ. ನಿಪಿ-1 ಅನ್ನು ದಿಃ 03.05.2012 ರಂದು ಬರೆಯಲಾಯಿತು. ಅದರ ಸಮಯ ಗೊತ್ತಿಲ್ಲ. ನಾನು, ನನ್ನ ಗಂಡ ಮತ್ತು ಎದುರು ಪಕ್ಷಗಾರರು ನಿಪಿ-1 ಅನ್ನು ಬರೆಯುವಾಗ ಇದ್ದೆವು.

8. ಚೆಕ್ಕನ್ನು ಸೋಮಯ್ಯ ರವರ ಹೆಸರಿಗೆ ನೀಡಿದ್ದೆ. ಸದರಿ ಚೆಕ್ಕಿನ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ನಿಪಿ-1 ರಲ್ಲಿ ಚಕ್ಕುಬಂದಿ ಪೂಃ ಕೆಂಗಮ್ಮ ರವರ ಜಮೀನು, ಪಶ್ಚಿಮ ಮತ್ತು ಉತ್ತರಕ್ಕೆಃ ಸರಕಾರಿ ರಸ್ತೆ, ದಃ ಎಸ್ ಟಿ ಚಂದ್ರೇಗೌಡರ ಜಮೀನು ಮತ್ತು ಇತರೇ ಇದೆ. ದಾವಾ ಸ್ವತ್ತು ಅನ್ನು 9 ನೇ ಪ್ರತಿವಾದಿ ಖರೀದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಪೋಟೋ ತೋರಿಸಿ ಈಗ ದಾವಾ ಸ್ವತ್ತು ಇರುವಂತಹ ಜಾಗ ಎಂದರೆ ಸಾಕ್ಷಿಯು ನಮ್ಮದು ಖಾಲಿ ಜಾಗ ಎಂದು ನುಡಿಯುತ್ತಾರೆ. ನಾನು ದಾವಾ ಸ್ವತ್ತು ಅನ್ನು ಕಳೆದ 1 ತಿಂಗಳ ಹಿಂದೆ ನೋಡಿದ್ದೆ. ಸಾಕ್ಷಿಗೆ ಒಂದು ಪೋಟೋ ತೋರಿಸಿ ಅದರಲ್ಲಿ ಬಾಳೆ ಗಿಡ ಹಾಕಿದ್ದಾರೆ ಎಂದರೆ ಹೌದು ಎಂದು ನುಡಿಯುತ್ತಾರೆ. ಆ ಪೋಟೋವನ್ನು **ನಿಡಿ-1**

ಎಂದು ಗುರುತಿಸಲಾಯಿತು. ದಾವಾ ಸ್ವತ್ತು ಅನ್ನು ಸೋಮಯ್ಯ ರವರು 7 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದು, ನಂತರ 7 ನೇ ಪ್ರತಿವಾದಿ 8 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ, ಈಗ 8 ನೇ ಪ್ರತಿವಾದಿ 9 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆಂದು ನನ್ನ ವಕೀಲರು ನನಗೆ ತಿಳಿಸಿದ್ದರು. ಈಗ 9 ನೇ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ.

9. ನಾವು ಪ್ರತಿವಾದಿಗಳಿಗೆ ನೋಟೀಸು ನೀಡಿಲ್ಲ. ನಾವು ನೋಟೀಸು ನೀಡಿದ ಬಗ್ಗೆ ಮಾಹಿತಿ ಇಲ್ಲ. ದಾವಾ ಸ್ವತ್ತುಗೆ ಸಂಬಂಧಿಸಿದಂತೆ 1 ರಿಂದ 6 ನೇ ಪ್ರತಿವಾದಿಗಳೊಂದಿಗೆ ಕ್ರಯದ ಕರಾರು ಪತ್ರ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರದ ಹಣವನ್ನು 1 ರಿಂದ 6 ನೇ ಪ್ರತಿವಾದಿಗಳು ಹಿಂದುರುಗಿಸಿದ್ದು, ಕರಾರು ಪತ್ರವನ್ನು ರದ್ದುಗೊಳಿಸಿದ್ದಾರೆ ಎಂದರೆ ಸರಿಯಲ್ಲ. 1 ರಿಂದ 6 ನೇ ಪ್ರತಿವಾದಿಗಳು 7 ನೇ ಪ್ರತಿವಾದಿಯಿಂದ ನಮಗೆ ಕರಾರು ಪತ್ರದ ಪೂರ್ತ ಹಣವನ್ನು ಕೊಡಿಸಿದ್ದಾರೆ ಎಂದರೆ ಸರಿಯಲ್ಲ. ಕರಾರು ಪತ್ರವನ್ನು ಒಂದು ವರುಷಕ್ಕೆ ಮಾಡಿಕೊಂಡಿದ್ದೆವು ಎಂದರೆ ಸರಿಯಲ್ಲ. ಒಂದು ವರುಷದ ಒಳಗೆ 1 ರಿಂದ 6 ನೇ ಪ್ರತಿವಾದಿಗಳು ಕ್ರಯ ಪತ್ರ ಬರೆದು ಕೊಡಲು ತಯಾರಿದ್ದರೂ ಸಹ ನಾವೇ ಬರೆಸಿಕೊಂಡಿಲ್ಲ ಎಂದರೆ ಸರಿಯಲ್ಲ.

10. 1 ರಿಂದ 6 ನೇ ಪ್ರತಿವಾದಿಗಳಿಗೆ ಕರಾರು ಪತ್ರ ಬರೆಯುವ ಕಾಲಕ್ಕೆ ಹಣದ ಸಮಸ್ಯೆ ಇತ್ತು ಎಂದರೆ ಸರಿ. ಕರಾರು ಪತ್ರವಾದ 5 ವರುಷಗಳಾದರೂ ನಾವು ಕ್ರಯಪತ್ರ ಬರೆಸಿಕೊಂಡಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರ ಬರೆಸಿಕೊಂಡ ಒಂದು ವರುಷದ ಒಳಗೆ ಪ್ರತಿವಾದಿಗಳಿಗೆ ನೋಟೀಸು ನೀಡಿ ಸ್ಕೆಚ್ ಹಾಗೂ ಇತರೇ ದಾಖಲಾತಿಗಳನ್ನು ತಯಾರಿಸಿಕೊಂಡು ಕ್ರಯ ಪತ್ರ ಬರೆದು ಕೊಡಿ ಎಂದು ತಿಳಿಸಿಲ್ಲ. ದಿಃ 30.03.2015 ರಂದು ಪ್ರತಿವಾದಿಗಳಿಗೆ ನೋಟೀಸು ನೀಡಿದ್ದೆವು. ನಮ್ಮ ಕರಾರು ಪತ್ರದ ವಾಯಿದೆ ಪ್ರಕಾರ ಒಂದು ವರುಷದ ಒಳಗೆ ನೋಟೀಸು ನೀಡಲು ತೊಂದರೆ ಇರಲಿಲ್ಲ.

11. ಪ್ರತಿವಾದಿಗಳು ಹಲವಾರು ಬಾರಿ ನಮ್ಮ ಮನೆಗೆ ಬಂದು ಉಳಿಕೆ ಹಣವನ್ನು ನೀಡಿ ಕ್ರಯಪತ್ರ ಮಾಡಿಸಿಕೊಳ್ಳಿ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ಒಂದು ವರುಷದ

ಒಳಗೆ ನಾವು ಕ್ರಯಪತ್ರವನ್ನು ನೊಂದಣಿ ಮಾಡಿಸದೇ ಇದ್ದಕಾರಣ ನಮ್ಮ ಹಣವನ್ನು ನಮಗೆ ವಾಪಸ್ಸು ನೀಡಿ 7 ನೇ ಪ್ರತಿವಾದಿಗೆ ದಾವಾ ಸ್ವತ್ತು ಅನ್ನು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ನಂತರ 7 ನೇ ಪ್ರತಿವಾದಿ 8 ನೇ ಪ್ರತಿವಾದಿಗೆ ದಾವಾ ಸ್ವತ್ತು ಅನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿ 9 ನೇ ಪ್ರತಿವಾದಿಗೆ ದಾವಾ ಸ್ವತ್ತು ಅನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಂತರ 9 ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿದ್ದಾರೆ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿ ದಾವಾ ಸ್ವತ್ತುನಲ್ಲಿ ಅಡಿಕೆ, ತೆಂಗು ಮತ್ತು ಬಾಳೆಯನ್ನು ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಕರಾರು ಪತ್ರದ ವಾಯಿದೆಯಂತೆ ಒಂದು ವರುಷದ ಒಳಗೆ ಕ್ರಯಪತ್ರ ಮಾಡಿಸಿಕೊಳ್ಳದೇ ಸುಮಾರು 3 ವರುಷದ ನಂತರ ನೋಟೀಸು ನೀಡಿ 9 ನೇ ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ. ನಾನು ನನ್ನ ಹಣವನ್ನು ಪಡೆದಿದ್ದರುಾ ಸಹ ಹಣ ಪಡೆದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರದ್ದಾಗಿದ್ದರೂ ಸಹ ನಿಪಿ-1 ರ ಆಧಾರದ ಮೇರೆಗೆ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(7 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ)

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**